ಕರ್ನಾಟಕ ಸರ್ಕಾರ ಸಚಿವಾಲಯ

ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಮತ್ತು ಮೇಲ್ಮನವಿ ಪ್ರಾಧಿಕಾರ

ಪ್ರಕರಣ ಸಂಖ್ಯೆ:ನಅಇ 36 ಎಂಎಲ್ಆರ್ 2025 (1687987)

1. ಶ್ರೀ. ಜಯಂತ ತಂದೆ ಬಾಲಕೃಷ್ಣ
   ಜಾಧವ, ಕಾರ್ಪೊರೇಟರ್, ಬೆಳಗಾವಿ
   ಮಹಾನಗರ ಪಾಲಿಕೆ ಮತ್ತು
2. ಶ್ರೀ. ಮಂಗೇಶ ತಂದೆ ನಾರಾಯಣ
   ಪವಾರ, ಕಾರ್ಪೊರೇಟರ್, ಬೆಳಗಾವಿ
   ಮಹಾನಗರ ಪಾಲಿಕೆ

.....ಮೇಲ್ಮನವಿದಾರರು

– ವಿರುದ್ಧ –

1. ಪ್ರಾದೇಶಿಕ ಆಯುಕ್ತರು,
   ಬೆಳಗಾವಿ ವಿಭಾಗ, ಬೆಳಗಾವಿ
2. ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ,
   ಬೆಳಗಾವಿ
3. ಶ್ರೀ. ಸುಜಿತ ಎಂ ಮುಳಗುಂದ,
   ಜಾಧವ ನಗರ, ಬೆಳಗಾವಿ
4. ಕಾರ್ಯಪಾಲಕ ಅಭಿಯಂತರರು,
   ಲೋಕೋಪಯೋಗಿ ಇಲಾಖೆ,
   ಬೆಳಗಾವಿ ವಿಭಾಗ, ಬೆಳಗಾವಿ
5. ಆಯುಕ್ತರು,
   ಬೆಳಗಾವಿ ಮಹಾನಗರ ಪಾಲಿಕೆ,
   ಬೆಳಗಾವಿ

.....ಪ್ರತಿವಾದಿ

1. ಶ್ರೀ. ಜಯಂತ ಜಾಧವ ಮತ್ತು ಶ್ರೀ. ಮಂಗೇಶ ಪವಾರ, ಕಾರ್ಪೊರೇಟರ್‌ಗಳು, ಬೆಳಗಾವಿ ಮಹಾನಗರ ಪಾಲಿಕೆ ಈ ಇಬ್ಬರು ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ಬೆಳಗಾವಿ ಮಹಾನಗರ ಪಾಲಿಕೆಯ ಕಾರ್ಪೊರೇಟರ್ ಸ್ಥಾನದಿಂದ ಅನರ್ಹಗೊಳಿಸಿ ಹೊರಡಿಸಿರುವ ಆದೇಶ ಸಂಖ್ಯೆ:ಪ್ರಾಆಬೆ/ಕೆ.ಎಂ.ಸಿ/ವಿವ.05/2024–25; ದಿನಾಂಕ:10/02/2025 ನ್ನು ಪ್ರಶ್ನಿಸಿ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್–26(3) ರಲ್ಲಿ

ಇರುವ ಅವಕಾಶದನ್ವಯ ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ ಇಲ್ಲಿ ಮೇಲ್ಮನವಿಯನ್ನು ದಾಖಲಿಸಿರುತ್ತಾರೆ ಹಾಗೂ ಈ ಆದೇಶವನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.

2. ಪ್ರಕರಣದ ವಿಚಾರಣೆಯಲ್ಲಿ ಮೇಲ್ಮನವಿದಾರರು ಮೇಲ್ಮನವಿದಾರರ ಪರ ವಕೀಲರು ಮತ್ತು ಪ್ರತಿವಾದಿಯವರ ಪರ ವಕೀಲರು, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ, ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರ ಕಚೇರಿಯ ಶಿರಸ್ತೇದಾರರು ಹಾಜರಾಗಿರುತ್ತಾರೆ.

3. <u>ಮೇಲ್ಮನವಿದಾರರು ಮೇಲ್ಮನವಿಯಲ್ಲಿ ಈ ಕೆಳಕಂಡ ವಿಷಯವನ್ನು ಪ್ರಸ್ತಾಪಿಸಿರುತ್ತಾರೆ:</u>

i. ಶ್ರೀ. ಸುಜಿತ್ ಮುಳಗುಂದ, ಬೆಳಗಾವಿ ಎಂಬುವವರು ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರಲ್ಲಿ ದೂರನ್ನು ನೀಡಿ, ಮೇಲ್ಮನವಿದಾರರಾದ ಜಯಂತ ಜಾಧವ (ವಾರ್ಡ್ ಸಂಖ್ಯೆ:23) ಮತ್ತು ಮಂಗೇಶ ಪವಾರ (ವಾರ್ಡ್ ಸಂಖ್ಯೆ:41) ಇವರು ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಕಾರ್ಪೊರೇಟರ್‌ಗಳಾಗಿರುತ್ತಾರೆ. ಇವರು ಲೋಕೋಪಯೋಗಿ ಇಲಾಖೆಯಿಂದ ನಿರ್ಮಾಣ ಮಾಡಿರುವ "ತಿನಿಸು ಕಟ್ಟೆ" ಮಳಿಗೆಗಳನ್ನು ಕಾರ್ಪೊರೇಟರ್ ಸ್ಥಾನಮಾನದ ಪ್ರಭಾವವನ್ನು ಬಳಸಿ, ತಿನಿಸು ಕಟ್ಟೆ ಅಂಗಡಿ ಸಂಖ್ಯೆ:29ನ್ನು ಒಂದನೇ ಮೇಲ್ಮನವಿದಾರರು ಅವರ ಪತ್ನಿಯವರ ಹೆಸರಿಗೆ ಹಾಗೂ ತಿನಿಸು ಕಟ್ಟೆ ಅಂಗಡಿ ಸಂಖ್ಯೆ:28 ನ್ನು ಎರಡನೆಯ ಮೇಲ್ಮನವಿದಾರರು ಅವರ ಪತ್ನಿಯ ಹೆಸರಿಗೆ ಹರಾಜಿನಲ್ಲಿ ಹಂಚಿಕೆ ಮಾಡಿಸಿಕೊಂಡಿರುತ್ತಾರೆ. ಇದು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್–26(1)(ಕೆ) ರನ್ವಯ ಸ್ಪಷ್ಟ ಉಲ್ಲಂಘನೆಯಾಗುವ ಕಾರಣ ಇಬ್ಬರೂ ಸದಸ್ಯರನ್ನು ಅನರ್ಹಗೊಳಿಸಿ ಮಹಾನಗರ ಪಾಲಿಕೆಯ ಸದಸ್ಯತ್ವವನ್ನು ರದ್ದುಪಡಿಸಬೇಕೆಂದು ಕೋರಿರುತ್ತಾರೆ;

ii. ಪ್ರತಿವಾದಿ–1 ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ಮೇಲ್ಮನವಿದಾರರಿಗೆ ಕಾರಣ ಕೇಳುವ ನೋಟೀಸನ್ನು ನೀಡಿ, ಮೇಲ್ಮನವಿದಾರರ

ವಿರುದ್ಧ ಕ್ರಮ ಕೈಗೊಳ್ಳುವ ಕುರಿತು ತಿಳಿಸಿರುತ್ತಾರೆ. ಮೇಲ್ಮನವಿದಾರರು ಸದರಿ ನೋಟಿಸ್‌ಗೆ ಆಕ್ಷೇಪಣಾ ಹೇಳಿಕೆಯನ್ನು, ಸ್ಪಷ್ಟೀಕರಣವನ್ನು ನೀಡಿರುತ್ತಾರೆ;

iii. ಪ್ರತಿವಾದಿ–1 ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ಇಬ್ಬರೂ ಪಕ್ಷಗಾರರ ಹೇಳಿಕೆಯನ್ನು ಆಲಿಸಿ ಇಬ್ಬರೂ ಮೇಲ್ಮನವಿದಾರರ ಬೆಳಗಾವಿ ಮಹಾನಗರ ಪಾಲಿಕೆಯ ಕಾರ್ಪೊರೇಟರ್ ಸದಸ್ಯತ್ವವನ್ನು ರದ್ದುಗೊಳಿಸಿ ಆದೇಶ ಸಂಖ್ಯೆ:ಪ್ರಾಆಬೆ/ಕೆಎಂಸಿ/ವಿವಾ–05/2024–25; ದಿನಾಂಕ:10/02/2025 ನ್ನು ಹೊರಡಿಸಿರುತ್ತಾರೆ.

iv. ಸದರಿ ಆದೇಶದಿಂದಾಗಿ ಬಾಧಿತರಾದ ಇಬ್ಬರೂ ಕಾರ್ಪೊರೇಟರ್‌ಗಳು ಈ ಮೇಲ್ಮನವಿ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿ, ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರ ಆದೇಶವು ಕಾನೂನಾತ್ಮಕ ಹಾಗೂ ಸಿಂಧುವಾಗಿರುವುದನ್ನು ಪ್ರಶ್ನಿಸಿರುತ್ತಾರೆ.

v. ಮೇಲ್ಮನವಿದಾರರ ಪತ್ನಿಯರು ಹರಾಜಿನಲ್ಲಿ ಪಡೆದಿರುವ ಆಕ್ಷೇಪಿತ ಮಳಿಗೆಗಳು, ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿದ್ದು, ಬೆಳಗಾವಿ ಮಹಾನಗರ ಪಾಲಿಕೆಯ ಅಧೀನದಲ್ಲಿ ಬರುವುದಿಲ್ಲ.

vi. ತಿನಿಸು ಕಟ್ಟೆ ಮಳಿಗೆಗಳು ದಿನಾಂಕ:09/12/2020 ರಂದು ಹರಾಜು ಮತ್ತು ಹಂಚಿಕೆಯಾಗಿದ್ದು ಮೇಲ್ಮನವಿದಾರರು ಆ ಸಂದರ್ಭದಲ್ಲಿ ಪಾಲಿಕೆಯ ಸದಸ್ಯರಾಗಿರಲಿಲ್ಲ; ಆದ್ದರಿಂದ, ದೂರುದಾರರು ಆರೋಪಿಸಿರುವಂತೆ ಮೇಲ್ಮನವಿದಾರರು ಕಾರ್ಪೊರೇಟರ್ ಅಧಿಕಾರವನ್ನು ದುರುಪಯೋಗ–ಪಡಿಸಿಕೊಂಡಿದ್ದಾರೆ ಎಂಬುದು ಸುಳ್ಳಾಗಿರುತ್ತದೆ.

vii. ಮೇಲ್ಮನವಿದಾರು ತಿನಿಸು ಕಟ್ಟೆ ಮಳಿಗೆಗಳ ಹಂಚಿಕೆದಾರರಾಗಿರುವುದಿಲ್ಲ; ದಿನಾಂಕ:09/12/2020 ರಂದು ಹರಾಜಿನಲ್ಲಿ ಮೇಲ್ಮನವಿದಾರರ ಪತ್ನಿಯರಿಗೆ ಹಂಚಿಕೆಯಾದ ನಂತರ ಅವರೇ ನಿರ್ವಹಣೆ ಮಾಡುತ್ತಿದ್ದು, ಮೇಲ್ಮನವಿದಾರರು ಯಾವುದೇ ಲಾಭದಾಯಕ ಸ್ಥಾನವನ್ನು ಅಂಗಸಂಸ್ಥೆ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದಿಂದ ಹೊಂದಿರುವುದಿಲ್ಲ;

ಮೇಲ್ಮನವಿದಾರರು ಮೇಲ್ಮನವಿ ಅರ್ಜಿಯಲ್ಲಿ ಪ್ರತಿವಾದಿ–1 ರವರು ಹೊರಡಿಸಿರುವ ದಿನಾಂಕ:10/02/2025 ರ ಆದೇಶ ಸಂಖ್ಯೆ:ಪ್ರಾಆಬೆ/ಕೆಎಸಿ/ವಿವ05/2024–25 ನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.

4. ಮೇಲ್ಮನವಿದಾರರ ಮೇಲ್ಮನವಿಗೆ ಪ್ರತಿಯಾಗಿ ಒಂದನೇ ಪ್ರತಿವಾದಿ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ಪ್ರಕರಣಕ್ಕೆ ಸಂಬಂಧಿಸಿದ ಆಕ್ಷೇಪಣಾ ಹೇಳಿಕೆ ಸಲ್ಲಿಸಿರುತ್ತಾರೆ ಹಾಗೂ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ; ಆಕ್ಷೇಪಣೆ ಹಾಗೂ ದಾಖಲಾತಿಗಳಲ್ಲಿ ಈ ಕೆಳಕಂಡಂತೆ ವಿವರಗಳನ್ನು ಒದಗಿಸಿರುತ್ತಾರೆ:

i. ಶ್ರೀ. ಸುಜಿತ್ ಮುಳಗುಂದ, ಬೆಳಗಾವಿ ರವರು ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ, ಲೊಕೋಪಯೋಗಿ ಇಲಾಖೆಯಿಂದ ನಿರ್ಮಿಸಿರುವ "ತಿನಿಸು ಕಟ್ಟೆ" ಮಳಿಗೆಗಳ ಹರಾಜು ಪ್ರಕ್ರಿಯೆಯಲ್ಲಿ ಮೇಲ್ಮನವಿದಾರರು ಪ್ರಭಾವವನ್ನು ಬಳಸಿ ಅಧಿಕಾರ ದುರುಪಯೋಗ ಮಾಡಿಕೊಂಡು ತಮ್ಮ ತಮ್ಮ ಪತ್ನಿಯರ ಹೆಸರಿಗೆ ಪಡೆದಿದ್ದು, ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್–26(1)(ಕೆ) ರನ್ವಯ ಸ್ಪಷ್ಟ ಉಲ್ಲಂಘನೆಯಾಗುವ ಕಾರಣವಾಗಿ ಇಬ್ಬರೂ ಸದಸ್ಯರನ್ನು ಅನರ್ಹಗೊಳಿಸಿ, ಮಹಾನಗರ ಪಾಲಿಕೆಯ ಸದಸ್ಯತ್ವವನ್ನು ರದ್ದುಪಡಿಸಬೇಕೆಂದು ಕೋರಿ ದಿನಾಂಕ:09/11/2023 ರಂದು ದೂರು ದಾಖಲಿಸಿರುತ್ತಾರೆ;

ii. ಸದರಿ ದೂರಿನನ್ವಯ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ರವರಿಗೆ ದಿನಾಂಕ:21/11/2023 ರಂದು ಪತ್ರ ಬರೆದು, ದೂರಿನ ಕುರಿತು ವರದಿಯನ್ನು ಸಲ್ಲಿಸುವಂತೆ ಕೋರಿರುತ್ತಾರೆ;

iii. ದಿನಾಂಕ:08/01/2024 ರ ಪತ್ರದನ್ವಯ ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ರವರು ಆಯುಕ್ತರು, ಮಹಾನಗರ ಪಾಲಿಕೆ ರವರಿಂದ ಈ ಬಗ್ಗೆ ವರದಿಯನ್ನು ಪಡೆದಿದ್ದು, ಸದರಿ ವರದಿಯಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರು ವರದಿಸಿರುವಂತೆ ಬೆಳಗಾವಿ ನಗರದ ಅಟಲ್ ಬಿಹಾರಿ ವಾಜಪೇಯಿ ಮಾರ್ಗ ಅಗ್ನಿ ಶಾಮಕ ಪಕ್ಕದಲ್ಲಿ (ರೈಲ್ವೆ ಬ್ರಿಡ್ಜ್ ಹತ್ತಿರ) ಸರ್ವೇ ನಂ.219/ಆ, 13 ಗುಂಟೆ ಲೋಕೋಪಯೋಗಿ ಇಲಾಖೆಯ ಜಾಗದಲ್ಲಿ ಮಳಿಗೆಗಳನ್ನು ನಿರ್ಮಿಸಲಾಗಿರುತ್ತದೆ;

ಸದರಿ ಮಳಿಗೆಗಳನ್ನು ಹಂತ–2 ರಲ್ಲಿ ಬಹಿರಂಗ ಹರಾಜಿಗಾಗಿ ವಿಭಾಗ ಮಟ್ಟದಲ್ಲಿ ಒಂದು ಸಮಿತಿಯನ್ನು ವಿಭಾಗ ಕಚೇರಿ ಆದೇಶ ಸಂಖ್ಯೆ:2943; ದಿನಾಂಕ:28/09/2020 ರನ್ವಯ ರಚಿಸಿ, ಮಳಿಗೆಗಳ ಹರಾಜು ಪ್ರಕ್ರಿಯೆಯನ್ನು ಅಧಿಸೂಚನೆ ಸಂಖ್ಯೆ:ಲೋ.ಇ/ಬೆವಿ/ತಾಂಸ /ಎಇ/ಗುತ್ತಿಗೆ/ಟೆಂಡರ್/ನೋಟಿಫಿಕೇಶನ್/ತಾಂಸ/ಉಗ್ರಾಣ/2020–21/2965; ದಿನಾಂಕ: 30/09/2020 ರನ್ವಯ ಮಾಡಲು ಈ ಕುರಿತ ಪ್ರಕಟಣೆಯನ್ನು ವಾರ್ತಾ ಇಲಾಖೆಯಿಂದ ದಿನಾಂಕ:01/10/2020 ರಂದು ಕನ್ನಡ ಗೋಪುರ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ ಹಾಗೂ ಪ್ರಕಟಣೆಯಲ್ಲಿ ನಿಗದಿಪಡಿಸಿದ್ದಂತೆ ದಿನಾಂಕ:08/10/2020 ರಂದು ಹರಾಜು ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ; ಸದರಿ ಬಹಿರಂಗ ಹರಾಜಿನಲ್ಲಿ ಮಳಿಗೆ ಸಂಖ್ಯೆ:28 ರಲ್ಲಿ (1) ಶ್ರೀಮತಿ. ಅನಿತಾ ಗು ನೇನಕರ (2) ಶ್ರೀಮತಿ ನೀತಾ ಮಂಗೇಶ ಪವಾರ ಮತ್ತು (3) ಶ್ರೀಮತಿ ಮಧುರಾ ಗಣೇಶ ದೇಸಾಯಿ ಈ ಮೂರು ಜನ ಭಾಗವಹಿಸಿರುತ್ತಾರೆ. ಇದರಲ್ಲಿ ಅತೀ ಹೆಚ್ಚು ಘೋಷಣೆ ಕೂಗಿದ ಶ್ರೀಮತಿ. ನೀತಾ ಮಂಗೇಶ ಪವಾರ ಇವರೊಂದಿಗೆ ದಿನಾಂಕ:07/09/2021 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಅದರಂತೆ ಮಳಿಗೆ ಸಂಖ್ಯೆ:29 ರಲ್ಲಿ (1) ಶ್ರೀಮತಿ ಸೋನಾಲಿ ಜೆ ಜಾಧವ (2) ಶ್ರೀಮತಿ ನೀತಾ ಎಂ. ಪವಾರ (3) ಲಕ್ಷ್ಮೀ ಆರ್. ಯಡಕೇ ಈ ಮೂರು ಜನ ಭಾಗವಹಿಸಿದ್ದು, ಇವರಲ್ಲಿ ಅತೀ ಹೆಚ್ಚು ಘೋಷಣೆ ಮಾಡಿದ್ದ ಶ್ರೀಮತಿ. ಸೋನಾಲಿ ಜೆ. ಜಾಧವ ಇವರೊಂದಿಗೆ ದಿನಾಂಕ:07/09/2021 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ ಎಂಬುದಾಗಿ ಮಾಹಿತಿಯನ್ನು ನೀಡಿರುತ್ತಾರೆ

iv. ಜಿಲ್ಲಾಧಿಕಾರಿಯವರು ತಮ್ಮ ವರದಿಯೊಂದಿಗೆ ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ ಹಾಗೂ ಕಾರ್ಯ ನಿರ್ವಾಹಕ ಇಂಜನಿಯರ್. ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ರವರು ಸಲ್ಲಿಸಿದ್ದ ವರದಿಯನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ.

v. ಶ್ರೀ. ಸುಜಿತ್ ಮುಳಗುಂದ, ಬೆಳಗಾವಿ ರವರು ಮೇಲ್ಮನವಿದಾರರ ವಿರುದ್ಧ ಸಲ್ಲಿಸಿದ ದೂರು ಅರ್ಜಿಯ ಸಂಬಂಧ ಪ್ರತಿವಾದಿ–2 ಜಿಲ್ಲಾಧಿಕಾರಿ, ಬೆಳಗಾವಿ ರವರಿಂದ ವರದಿಯನ್ನು ಕೋರಲಾಗಿತ್ತು, ಪ್ರತಿವಾದಿ–2 ರವರು ಈ ಸಂಬಂಧ ಪ್ರತಿವಾದಿ–5 ಆಗಿರುವ ಆಯುಕ್ತರು, ಬೆಳಗಾವಿ ಮಹಾನಗರ ಪಾಲಿಕೆ ರವರಿಂದ ವರದಿ ಪಡೆದು

ಸಲ್ಲಿಸಿರುತ್ತಾರೆ. ಈ ಎರಡು ವರದಿಗಳಲ್ಲಿ ಮೇಲ್ಮನವಿದಾರರ ವಿರುದ್ಧ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್–26(1)(ಸಿ) & (ಕೆ) ರಡಿಯಲ್ಲಿ ಕ್ರಮ ಜರುಗಿಸಲು ಶಿಫಾರಸ್ಸು ಮಾಡಿರುತ್ತಾರೆ.

vi. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ಜಿಲ್ಲಾಧಿಕಾರಿಗಳು ಹಾಗೂ ಆಯುಕ್ತರು, ಮಹಾನಗರಪಾಲಿಕೆ, ಬೆಳಗಾವಿ ಇವರು ಸಲ್ಲಿಸಿರುವ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಪಾಲಿಕೆ ಸದಸ್ಯರಾದ ಶ್ರೀ ಜಯಂತ್ ಜಾಧವ ಮತ್ತು ಶ್ರೀ ಮಂಗೇಶ್ ಪವಾರ್ ಇವರುಗಳಿಗೆ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್–26(1)(ಸಿ) & 26(1)(ಕೆ) ರನ್ವಯ ಕ್ರಮಜರುಗಿಸುವ ಕುರಿತು ಪ್ರಸ್ತಾಪಿಸಿರುತ್ತಾರೆ. ಸರ್ಕಾರದ ಪತ್ರ ಸಂಖ್ಯೆ: ನಅಇ 12 ಎಸಿಬಿ 2024 ದಿನಾಂಕ: 13–02–2024 ರಲ್ಲಿ ಮಹಾನಗರಪಾಲಿಕೆ ಸದಸ್ಯರುಗಳ ಸದಸ್ಯತ್ವವನ್ನು ರದ್ದುಗೊಳಿಸುವ ಅಧಿಕಾರವು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್–26(2)ರಲ್ಲಿ ಪ್ರಾದೇಶಿಕ ಆಯುಕ್ತರಿಗೆ ಇರುವುದರಿಂದ ತಮ್ಮ ಹಂತದಲ್ಲಿಯೇ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರಿಗೆ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ಮೇಲ್ಮನವಿದಾರರಿಗೆ ನೋಟೀಸ್ ನೀಡಿ ದೂರು ಅರ್ಜಿಗೆ ಸಂಬಂಧಿಸಿದಂತೆ ಹಾಗೂ ಜಿಲ್ಲಾಧಿಕಾರಿಗಳು, ಬೆಳಗಾವಿ ಮತ್ತು ಆಯುಕ್ತರು, ಮಹಾನಗರಪಾಲಿಕೆ, ಬೆಳಗಾವಿ ಇವರ ವರದಿಗಳಿಗೆ ಸಮಜಾಯಿಷಿ ಸಲ್ಲಿಸುವಂತೆ ತಿಳಿಸಿದ್ದು, ಅವರು ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

vii. ಮೇಲ್ಮನವಿದಾರರು ಮಹಾನಗರ ಪಾಲಿಕೆಯ ಸದಸ್ಯರಾಗಿ ಆಯ್ಕೆಯಾಗಿರುವ ಪೂರ್ವದಲ್ಲಿ 1ನೇ ಮೇಲ್ಮನವಿದಾರರಾದ ಶ್ರೀ. ಜಯಂತ ಜಾಧವ ರವರು ಅವರ ಪತ್ನಿ ಶ್ರೀಮತಿ. ಸೋನಾಲಿ ಜೆ.ಜಾಧವ ರವರ ಹೆಸರಿಗೆ ಮಳಿಗೆ ಸಂಖ್ಯೆ:29 ನ್ನು ಹಾಗೂ 2ನೇ ಮೇಲ್ಮನವಿದಾರರಾದ ಶ್ರೀ. ಮಂಗೇಶ್ ಪವಾರ್ ರವರು ಅವರ ಪತ್ನಿ ಶ್ರೀಮತಿ. ನೀತಾ ಮಂಗೇಶ್ ಪವಾರ್ ರವರ ಹೆಸರಿಗೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ಬೆಳಗಾವಿ ಇವರು ನಿರ್ಮಾಣ ಮಾಡಿ ಹರಾಜು ಮಾಡಿರುವ ಮಳಿಗೆ ಸಂಖ್ಯೆ:28 ನ್ನು ಅಧಿಕಾರ ದುರುಪಯೋಗಪಡಿಸಿಕೊಂಡು ಹಂಚಿಕೆ

ಮಾಡಿಸಿಕೊಂಡಿರುತ್ತಾರೆ; ದೂರುದಾರರು ಹಾಗೂ ಪ್ರತಿವಾದಿ–2 ಮತ್ತು ಪ್ರತಿವಾದಿ–5 ರ ವರದಿಯಲ್ಲಿ ಇದು ಕರ್ನಾಟಕ ಮಹಾನಗರ ಪಾಲಿಕೆ ಅಧಿನಿಯಮ 1976 ಸೆಕ್ಷನ್–26(1)(ಸಿ) & (ಕೆ) ರ ಉಲ್ಲಂಘನೆಯಾಗಿದೆ. ಮೇಲ್ಮನವಿದಾರರು 2021 ರಲ್ಲಿ ಮಹಾನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿ ದಿನಾಂಕ: 06.02.2023 ರಂದು ಪಾಲಿಕೆ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿರುತ್ತಾರೆ.

viii. ತಿನಿಸು ಕಟ್ಟೆ ಘಟಕದ ಮಳಿಗೆಗಳು ಲೋಕೋಪಯೋಗಿ ಇಲಾಖೆಯಿಂದ ನಿರ್ಮಾಣಗೊಂಡು ಅವರಿಂದ ಹರಾಜು ಮಾಡಲ್ಪಟ್ಟಿದ್ದು, ಇವುಗಳನ್ನು ಬೆಳಗಾವಿ ಮಹಾನಗರ ಪಾಲಿಕೆಯು ನಿರ್ವಹಣೆ ಮಾಡುತ್ತಿದೆ. ಈ ಮಳಿಗೆಳು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುತ್ತದೆ. ಈ ಮಳಿಗೆಗಳನ್ನು ಈಗಲೂ ಮೇಲ್ಮನವಿದಾರರ ಪತ್ನಿಯರು ನಡೆಸುತ್ತಿದ್ದು, ಮಹಾನಗರ ಪಾಲಿಕೆ ಷರತ್ತು ಮತ್ತು ನಿಬಂಧನೆಗಳಂತೆ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸುತ್ತಿರುತ್ತಾರೆ. ಮೇಲ್ಮನವಿದಾರರು ಸಲ್ಲಿಸಿರುವ ಸಮಜಾಯಿಷಿಯಲ್ಲಿ ತಾವು ಮಳಿಗೆಗಳ ಹಂಚಿಕೆದಾರರಾಗಿರುವುದಿಲ್ಲ. ಆದರೆ, ಮಳಿಗೆಗಳನ್ನು ತಮ್ಮ ಪತ್ನಿಯವರು ಈಗಲೂ ನಡೆಸುತ್ತಿರುತ್ತಾರೆ.

ix. ಮೇಲ್ಮನವಿದಾರರು ಸಲ್ಲಿಸಿದ ಸಮಜಾಯಿಷಿಯನ್ನು ದಾಖಲೆಗೆ ತೆಗೆದುಕೊಂಡು ದಿನಾಂಕ: 11/03/2025, 17/05/2025, 05/06/2025 ಮತ್ತು ದಿನಾಂಕ: 11/06/2025 ರಂದು ವಿಚಾರಣೆಯನ್ನು ನಡೆಸಲಾಗಿದೆ. ವಿಚಾರಣೆಯಲ್ಲಿ ಮೇಲ್ಮನವಿದಾರರಿಗೆ ಅವಕಾಶ ನೀಡಲಾಗಿದೆ ಹಾಗೂ ಅವರ ವಿವರಣೆಯನ್ನು ಕೇಳಲಾಗಿದೆ. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ವಾದ–ಪ್ರತಿವಾದವನ್ನು ಅಲಿಸಲಾಗಿದೆ. ಎರಡೂ ಪಕ್ಷಗಳ ವಕೀಲರ ಹೇಳಿಕೆಗಳನ್ನು ದಾಖಲಿಸಿದ್ದು, ಸಲ್ಲಿಸಿರುವ ವಾದವನ್ನು ಪರಿಶೀಲಿಸಿ ದಿನಾಂಕ:09/12/2024 ರಂದು ಅಂತಿಮ ವಿಚಾರಣೆಯನ್ನು ನಡೆಸಿ ಪಾಲಿಕೆ ಸದಸ್ಯರ ಅನರ್ಹತೆ ಸಂಬಂಧ ದಿನಾಂಕ:10/02/2025 ರಂದು ಆದೇಶ ಹೊರಡಿಸಲಾಗಿದೆ.

5. ಮೇಲ್ಮನವಿ ಅರ್ಜಿಯಲ್ಲಿ ಮೂರನೇ ಪ್ರತಿವಾಗಿಯಾಗಿರುವ ಶ್ರೀ ಸುಜಿತ್ ಎಂ. ಮುಳಗುಂದ, ಬೆಳಗಾವಿ ರವರ ಪರವಾಗಿ ವಕೀಲರು ಸಲ್ಲಿಸಿರುವ ಲಿಖಿತ ವಾದದಲ್ಲಿ ಈ ಕೆಳಗಿನ ಅಂಶಗಳಂತೆ ಸಲ್ಲಿಸಿರುತ್ತಾರೆ:

i. ಪ್ರಾದೇಶಿಕ ಆಯುಕ್ತರು ಬೆಳಗಾವಿ ಇವರು ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ರ ಕಲಂ–26(2) ರ ಜೊತೆಗೆ ಕಲಂ–26(1)(ಸಿ) & (ಕೆ) ರಡಿಯಲ್ಲಿ ದಿನಾಂಕ:10/02/2025 ರಂದು ಹೊರಡಿಸಿರುವ ಅನರ್ಹತೆಯ ಆದೇಶವು ಸಮಂಜಸ ಹಾಗೂ ಕಾನೂನು ಬದ್ದವಾಗಿರುತ್ತದೆ; ಈ ಆದೇಶವು ಅರೆ ನ್ಯಾಯಾಂಗ ವಿಚಾರಣೆಯಲ್ಲಿ ಮೇಲ್ಮನವಿದಾರರಿಗೆ ಅವಕಾಶ ನೀಡಿ ಅವರ ಅಹವಾಲನ್ನು ಆಲಿಸಿ, ಕಾನೂನು ಅವಕಾಶಗಳಂತೆ ಹೊರಡಿಸಿದ್ದು ಪ್ರಸ್ತುತ ಮೇಲ್ಮನವಿಯು ಕ್ರಮದ ನಿಧಾನತೆಗಾಗಿ ಹೂಡಿರುವುದಾಗಿರುತ್ತದೆ.

ii. ಮೇಲ್ಮನವಿದಾರರು ಹಾಗೂ ಅವರ ಪತ್ನಿಯರು ಆರ್ಥಿಕ ದುರ್ಬಲ ವರ್ಗದವರಾಗಿರುವುದಿಲ್ಲ ಅಥವಾ ಅವರು ಅನಾನುಕೂಲಕರ ವರ್ಗಕ್ಕೆ ಸೇರಿದವರಾಗಿರುವುದಿಲ್ಲ. ಇವರು ಹರಾಜಿನಲ್ಲಿ ಅವರ ಪತ್ನಿಯರ ಪರವಾಗಿ ಬದಲೀ ಪ್ರತಿನಿಧಿಯಾಗಿ ಭಾಗವಹಿಸಿರುತ್ತಾರೆ. ಇದು ಸಾರ್ವಜನಿಕ ನೀತಿಯಿಂದ ತಪ್ಪಿಸಿಕೊಳ್ಳುವ ಅನೈತಿಕ ಹಾಗೂ ಅವಕಾಶವಾದಿತನವಾಗಿರುತ್ತದೆ.

iii. ಮೇಲ್ಮನವಿದಾರರು ಪ್ರಾದೇಶಿಕ ಆಯುಕ್ತರ ಮುಂದೆ ನಡೆದ ನಡವಳಿಗಳಲ್ಲಿ ಮಳಿಗೆಗಳನ್ನು ಈಗಲೂ ತಮ್ಮ ಪತ್ನಿಯರು ನಿರ್ವಹಣೆ ಮಾಡುತ್ತಿದ್ದಾರೆ ಎಂದು ತಿಳಿಸಿದ್ದು, ಇದು ಮೇಲ್ಮನವಿದಾರರು ಸಾರ್ವಜನಿಕ ಪಾತ್ರದಲ್ಲಿ ಆರ್ಥಿಕ ಲಾಭ ಹೊಂದಿಲ್ಲ ಎಂಬುದನ್ನು ತಿಳಿಸಲು ವಿಫಲರಾಗಿದ್ದು, ಕಲಂ–26(1)(ಕೆ) ರನ್ವಯ ಉಲ್ಲಂಘನೆಯಾಗಿರುತ್ತದೆ.

iv. ಮೇಲ್ಮನವಿದಾರರು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮದಡಿ ಸಲ್ಲಿಸುವ ವಾರ್ಷಿಕ ಆಸ್ತಿ ವರದಿಯಲ್ಲಿ ಸ್ವಯಂ ಪ್ರೇರಿತವಾಗಿ ಈ ಮಾಹಿತಿಯನ್ನು ಸಲ್ಲಿಸಬೇಕಿದ್ದು, ಇವರು ಈ ಆಸ್ತಿ ವಿವರಗಳನ್ನು ಸಲ್ಲಿಸಲು ವಿಪಲರಾಗಿರುತ್ತಾರೆ.

v. ಮೇಲ್ಮನವಿದಾರರು ಹಾಗೂ ಅವರ ಪತ್ನಿಯರು ಈ ಮಳಿಗೆಗಳನ್ನು ತಾವೇ ಉಳಿಸಿಕೊಂಡು ಇವುಗಳನ್ನು ವೈಯಕ್ತಿಕ ಲಾಭ ಗಳಿಕೆಗಾಗಿ ಸಬ್–ಲೀಜ್ ಮಾಡಿರುತ್ತಾರೆ. ಇದು ಹಂಚಿಕೆಯ ಷರತ್ತುಗಳ ಉಲ್ಲಂಘನೆಯಾಗಿರುತ್ತದೆ ಹಾಗೂ ಇದು ರಾಜ್ಯ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವುದಾಗಿದೆ.

ಪ್ರಾದೇಶಿಕ ಆಯುಕ್ತರು, ಬೆಳಗಾವಿ ಇವರು ಮೇಲ್ಮನವಿದಾರರನ್ನು ಕಲಂ 26 (2) ರನ್ವಯ ಅನರ್ಹಗೊಳಿಸಿ ಹೊರಡಿಸಿದ ಆದೇಶವು ತರ್ಕಬದ್ದ ಹಾಗೂ ಕಾನೂನು ಬದ್ದ ಆದೇಶವಾಗಿದ್ದು, ಮೇಲ್ಮನವಿ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.

6. ಮೇಲ್ಮನವಿಯನ್ನು ದಿನಾಂಕ:11/03/2025, ದಿನಾಂಕ:17/05/2025, ದಿನಾಂಕ: 05/06/2025 ಮತ್ತು ದಿನಾಂಕ:11/06/2025 ರಂದು ವಿಚಾರಣೆಯನ್ನು ನಡೆಸಲಾಗಿದೆ. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ವಾದ–ಪ್ರತಿವಾದವನ್ನು ಆಲಿಸಲಾಗಿದೆ. ಮೇಲ್ಮನವಿದಾರರು ಹಾಗೂ ಪ್ರತಿವಾದಿ ಪರ ವಕೀಲರು ಲಿಖಿತ ಹೇಳಿಕೆಯನ್ನು ದಾಖಲಿಸಿದ್ದು, ಸಲ್ಲಿಸಿರುವ ಲಿಖಿತ ವಾದವನ್ನು ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ.

i. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ ಬೆಳಗಾವಿ ಇವರು ಲೋಕೋಪಯೋಗಿ ಇಲಾಖೆಯ 20 ಮಳಿಗೆಗಳನ್ನು ತಿಂಗಳ ಬಾಡಿಗೆ ಆಧಾರದಲ್ಲಿ ಐದು ವರ್ಷಗಳ ಅವಧಿಗೆ ಹರಾಜು ಪಡಿಸುವ ಸಂಬಧ ದಿನಾಂಕ: 03.09.2020 ರಂದು "ಮಳಿಗೆಗಳ ಮೊಹರಬಂದ್ ಲಕೋಟೆ ಹಾಗೂ ಬಹಿರಂಗ ಹರಾಜು ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

ii. ಅಧೀಕ್ಷಕರ ಇಂಜಿನಿಯರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ ಬೆಳಗಾವಿ ಇವರು ದಿನಾಂಕ:09.12.2020 ರ ಆದೇಶದಲ್ಲಿ ಅತೀ ಹೆಚ್ಚು ಬಾಡಿಗೆಯನ್ನು ಪ್ರಸ್ತಾಪಿಸಿದ ಬೇಡಿಕೆದಾರರ ಬಾಡಿಗೆ ಮೊತ್ತವನ್ನು ವಿವರಗಳಿಗೆ ಅನುಗುಣವಾಗಿ ಅನುಮೋದನೆ ನೀಡಿರುತ್ತಾರೆ.

iii. ಬಹಿರಂಗ ಹರಾಜಿನಲ್ಲಿ ಮಳಿಗೆ ಸಂಖ್ಯೆ 28 ರಲ್ಲಿ 3 ಜನ ಭಾಗವಹಿಸಿದ್ದು, ಅತೀ ಹೆಚ್ಚು ಘೋಷಣೆ ಕೂಗಿದ ಶ್ರೀಮತಿ ಗೀತಾ ಮಂಗೇಶ್ ಪವಾರ್ ಇವರೊಂದಿಗೆ ದಿನಾಂಕ: 07.09.2021 ರಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಮಳಿಗೆ ಸಂಖ್ಯೆ: 29 ರಲ್ಲಿ 3 ಜನ ಭಾಗವಹಿಸಿದ್ದು ಅತೀ ಹೆಚ್ಚು ಘೋಷಣೆ ಕೂಗಿದ ಶ್ರೀಮತಿ ಸೋನಾಲಿ ಜಿ ಜಾಧವ ಇವರೊಂದಿಗೆ ದಿನಾಂಕ:07.09.2021 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.

iv. ಬೆಳಗಾವಿ ಮಹಾನಗರ ಪಾಲಿಕೆ ಸದಸ್ಯರ ಸಾರ್ವಜನಿಕ ಚುನಾವಣೆಗಾಗಿ ದಿನಾಂಕ: 03–09–2021 ರಂದು ಚುನಾವಣೆ ನಡೆದು ದಿನಾಂಕ: 06–09–2021 ರಂದು ಫಲಿತಾಂಶ ಘೋಷಣೆಯಾಗಿ, ಅದರಂತೆ ಮೇಲ್ಮನವಿದಾರರಾದ ಶ್ರೀ ಜಯಂತ್ ಜಾಧವ ಇವರು ವಾರ್ಡ್ ಸಂಖ್ಯೆ: 23 ಮತ್ತು ಶ್ರೀ ಮಂಗೇಶ್ ಪವಾರ್ ಇವರು ವಾರ್ಡ್ ಸಂಖ್ಯೆ: 41 ರಲ್ಲಿ ಚುನಾಯಿತರಾಗಿ ದಿನಾಂಕ:06.02.2023 ರಂದು ಪಾಲಿಕೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿರುತ್ತಾರೆ.

v. ಶ್ರೀ. ಸುಜಿತ್ ಮುಳಗುಂದ, ಬೆಳಗಾವಿ ಎಂಬುವವರು ಈ ಇಬ್ಬರು ಕಾರ್ಪೊರೇಟರ್ ಗಳು ತಮ್ಮ ಕೌನ್ಸೆಲರ್/ಕಾರ್ಪೊರೇಟರ್ ಸ್ಥಾನವನ್ನು ದುರುಪಯೋಗಪಡಿಸಿಕೊಂಡು ಲೋಕೋಪಯೋಗಿ ಇಲಾಖೆಯ ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯ "ತಿನಿಸು ಕಟ್ಟೆ" ಮಳಿಗೆಗಳಲ್ಲಿ 02 ಮಳಿಗೆಗಳನ್ನು ತಮ್ಮ ತಮ್ಮ ಪತ್ನಿಯರ ಹೆಸರಿಗೆ ಮಾಡಿಸಿಕೊಂಡಿರುವುದಾಗಿ, ಅದರಂತೆ ಇಬ್ಬರೂ ಸದಸ್ಯರನ್ನು ಅನರ್ಹಗೊಳಿಸಿ, ಮಹಾನಗರ ಪಾಲಿಕೆಯ ಸದಸ್ಯತ್ವವನ್ನು ರದ್ದುಪಡಿಸಬೇಕೆಂದು ಕೋರಿ ದಿನಾಂಕ:09/11/2023 ರಂದು ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರಲ್ಲಿ ದೂರನ್ನು ನೀಡಿರುತ್ತಾರೆ;

vi. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ದೂರು ಅರ್ಜಿಯ ಸಂಬಂಧ ಪರಿಶೀಲಿಸಿ ವರದಿ ಸಲ್ಲಿಸಲು ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಇವರನ್ನು ದಿನಾಂಕ: 21/11/2023 ರಲ್ಲಿ ಕೋರಿರುತ್ತಾರೆ.

vii. ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಬೆಳಗಾವಿ ಇವರು ದಿನಾಂಕ:27.11.2023 ರ ಪತ್ರದಲ್ಲಿ ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ವರದಿ ಕೋರಿದ್ದು, ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ ರವರು ದಿನಾಂಕ:28.12.2023 ರ ಪತ್ರದಲ್ಲಿ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಬೆಳಗಾವಿ ಇವರಿಂದ ವರದಿ ಕೋರಿರುತ್ತಾರೆ. ಅವರುಗಳು ಈ ಕೆಳಗಿನಂತೆ ವರದಿ ಸಲ್ಲಿಸಿರುತ್ತಾರೆ.

<u>ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರ ವರದಿ:</u>

ಬೆಳಗಾವಿ ನಗರದ ಅಟಲ್ ಬಿಹಾರಿ ವಾಜಪೇಯಿ ಮಾರ್ಗ ಅಗ್ನಿ ಶಾಮಕ ಪಕ್ಕ (ರೈಲ್ವೆ ಬ್ರಿಡ್ಜ್ ಹತ್ತಿರ) ದಲ್ಲಿ ಸರ್ವೇ ನಂ.219/ಆ, 13 ಗುಂಟೆ ಲೋಕೋಪಯೋಗಿ ಇಲಾಖೆಯ ಜಾಗದಲ್ಲಿ ಮಳಿಗೆಗಳನ್ನು ನಿರ್ಮಿಸಲಾಗಿರುತ್ತದೆ; ಸದರಿ ಮಳಿಗೆಗಳನ್ನು ಹಂತ–2 ರಲ್ಲಿ ಬಹಿರಂಗ ಹರಾಜಿಗಾಗಿ ವಿಭಾಗ ಮಟ್ಟದಲ್ಲಿ ಒಂದು ಸಮಿತಿಯನ್ನು ವಿಭಾಗ ಕಚೇರಿ ಆದೇಶ ಸಂಖ್ಯೆ:2943; ದಿನಾಂಕ:28/09/2020 ರನ್ವಯ ರಚಿಸಿ, ಮಳಿಗೆಗಳ ಹರಾಜು ಪ್ರಕ್ರಿಯೆಯನ್ನು ಅಧಿಸೂಚನೆ ಸಂಖ್ಯೆ:ಲೋ.ಇ/ಬೆವಿ/ತಾಂಸ/ಎಇ /ಗುತ್ತಿಗೆ/ಟೆಂಡರ್ /ನೋಟಿಫಿಕೇಶನ್ /ತಾಂಸ/ ಉಗ್ರಾಣ/2020–21/2965; ದಿನಾಂಕ:30/09/2020 ರನ್ವಯ ಮಾಡಲು ಈ ಕುರಿತ ಪ್ರಕಟಣೆಯನ್ನು ವಾರ್ತಾ ಇಲಾಖೆಯಿಂದ ದಿನಾಂಕ:01/10/2020 ರಂದು ಕನ್ನಡ ಗೋಪುರ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ ಹಾಗೂ ಪ್ರಕಟಣೆಯಲ್ಲಿ ನಿಗದಿಪಡಿಸಿದ್ದಂತೆ ದಿನಾಂಕ:08/10/2020 ರಂದು ಹರಾಜು ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ; ಸದರಿ ಬಹಿರಂಗ ಹರಾಜಿನಲ್ಲಿ ಮಳಿಗೆ ಸಂಖ್ಯೆ:28 ರಲ್ಲಿ (1) ಶ್ರೀಮತಿ. ಅನಿತಾ ಗು ನೇನಕರ (2) ಶ್ರೀಮತಿ ನೀತಾ ಮಂಗೇಶ ಪವಾರ ಮತ್ತು (3) ಶ್ರೀಮತಿ ಮಧುರಾ ಗಣೇಶ ದೇಸಾಯಿ ಈ ಮೂರು ಜನ ಭಾಗವಹಿಸಿರುತ್ತಾರೆ. ಇದರಲ್ಲಿ ಅತೀ ಹೆಚ್ಚು ಘೋಷಣೆ ಕೂಗಿದ ಶ್ರೀಮತಿ. ನೀತಾ ಮಂಗೇಶ ಪವಾರ ಇವರೊಂದಿಗೆ ದಿನಾಂಕ:07/09/2021 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಅದರಂತೆ ಮಳಿಗೆ ಸಂಖ್ಯೆ:29 ರಲ್ಲಿ (1) ಶ್ರೀಮತಿ ಸೋನಾಲಿ ಜೆ ಜಾಧವ (2) ಶ್ರೀಮತಿ ನೀತಾ ಎಂ. ಪವಾರ (3) ಲಕ್ಷ್ಮೀ ಆರ್. ಯಡಕೇ ಈ ಮೂರು ಜನ ಭಾಗವಹಿಸಿದ್ದು, ಇವರಲ್ಲಿ ಅತೀ ಹೆಚ್ಚು ಘೋಷಣೆ ಮಾಡಿದ್ದ ಶ್ರೀಮತಿ. ಸೋನಾಲಿ ಜೆ. ಜಾಧವ ಇವರೊಂದಿಗೆ ದಿನಾಂಕ:07/09/2021 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ದಿನಾಂಕ:04/01/2022 ರ ಪತ್ರದಲ್ಲಿ ತಿಳಿಸಿರುತ್ತಾರೆ.

ಬೆಳಗಾವಿ ಮಹಾನಗರ ಪಾಲಿಕೆ ಆಯುಕ್ತರ ವರದಿ :

ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಬೆಳಗಾವಿ ರವರ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ –

26 (1) (ಸಿ) ಹಾಗೂ ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 26 (1) (ಕೆ) ರನ್ವಯ ಮುಂದಿನ ಸೂಕ್ತ ಕ್ರಮ ಜರುಗಿಸಲು ಮಾನ್ಯರ ಅವಗಾಹನೆಗೆ ಸಲ್ಲಿಸಲಾಗಿದೆ ಎಂದು ದಿನಾಂಕ:06.01.2024 ರ ಪತ್ರದಲ್ಲಿ ತಿಳಿಸಿರುತ್ತಾರೆ.

viii. ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಬೆಳಗಾವಿ ಇವರು ದಿನಾಂಕ: 08.01.2024ರ ಪತ್ರದೊಂದಿಗೆ ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ಇವರು ಸಲ್ಲಿಸಿರುವ ವರದಿಗಳನ್ನು ಲಗತ್ತು ಮಾಡಿ ಸಲ್ಲಿಸಿ, ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ –26 (1) (ಸಿ) ಹಾಗೂ ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್ 26 (1) (ಸಿ) ರನ್ವಯ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ ಎಂದು ತಿಳಿಸಿರುತ್ತಾರೆ.

ix. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ದೂರಿನ ಕುರಿತು ವಿಚಾರಣೆ ನಡೆಸುವ ಸಂಬಂಧ ಮೇಲ್ಮನವಿ ಸಲ್ಲಿಸಿರುವ 02 ಕಾರ್ಪೊರೇಟರ್ ಗಳಿಗೂ ಸ್ಪಷ್ಟೀಕರಣ ಕೋರಿ ದಿನಾಂಕ:15/02/2024 ರಂದು ನೋಟಿಸ್ ನ್ನು ನೀಡಿರುತ್ತಾರೆ ಹಾಗೂ ಸಮಜಾಯಿಷಿಯನ್ನು ಪಡೆದು ಪರಿಶೀಲಿಸಿರುತ್ತಾರೆ;

x. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ತಮಗೆ ನೀಡಿದ ನೋಟಿಸ್‌ಗೆ ಮೇಲ್ಮನವಿದಾರರು ದಿನಾಂಕ:02/03/2024 ರಂದು ಉತ್ತರವನ್ನು ನೀಡಿದ್ದು, ದಿನಾಂಕ:03/09/2021 ರಂದು ನಡೆದ ಬೆಳಗಾವಿ ಮಹಾನಗರ ಪಾಲಿಕೆಯ ವಾರ್ಡುವಾರು ಚುನಾವಣೆಯಲ್ಲಿ ವಾರ್ಡ್ ಸಂಖ್ಯೆ:23 ಕ್ಕೆ ಶ್ರೀ. ಜಯಂತ ಜಾಧವ ಹಾಗೂ ವಾರ್ಡ್ ಸಂಖ್ಯೆ:41 ಕ್ಕೆ ಶ್ರೀ. ಮಂಗೇಶ ಪವಾರ ರವರು ಚುನಾಯಿತರಾಗಿದ್ದು, ದಿನಾಂಕ:06/02/2023 ರಂದು ಕಾರ್ಪೊರೇಟರ್ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದುದಾಗಿ ತಿಳಿಸುತ್ತಾ, ತಾವು ಕಾರ್ಪೊರೇಟರ್ ಆಗುವ ಪೂರ್ವದಲ್ಲಿ ದಿನಾಂಕ:09/12/2020 ರಂದು "ತಿನಿಸು ಕಟ್ಟೆ" ಮಳಿಗೆಗಳನ್ನು ತಮ್ಮ ತಮ್ಮ ಪತ್ನಿಯರು ಹರಾಜಿನಲ್ಲಿ ಪಡೆದು ಹಂಚಿಕೆ ಮಾಡಿರುವುದರಿಂದ, ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್–26(1)(ಸಿ), 26(1)(ಕೆ),

26(2) ತಮಗೆ ಅನ್ವಯವಾಗುವುದಿಲ್ಲವೆಂದು ತಿಳಿಸಿ ದೂರು ವಿಚಾರಣಾ ಪ್ರಕ್ರಿಯೆಯು ನಿಯಮಾನುಸಾರ ಪರಿಗಣನೀಯವಾಗಿರುವುದಿಲ್ಲವೆಂದೂ, ತಮ್ಮ ವಿರುದ್ಧದ ಕ್ರಮಗಳನ್ನು ಕೈಬಿಡಬೇಕೆಂದೂ ಕೋರಿರುತ್ತಾರೆ.

xi. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ಈ ದೂರಿನ ಪ್ರಕರಣದ ವಿಚಾರಣೆಯ ಪೂರ್ವದಲ್ಲಿ ಮೇಲ್ಮನವಿದಾರರಿಗೆ ದಿನಾಂಕ: 15/02/2024 ರಂದು ವಿವರಣೆ ಕೇಳುವ ನೋಟೀಸು ನೀಡಿ ಅವರಿಂದ ಲಿಖಿತ ಉತ್ತರವನ್ನು ಪಡೆದುಕೊಂಡಿರುತ್ತಾರೆ ಹಾಗೂ ಅವರಿಗೆ ಅವಕಾಶವನ್ನು ನೀಡಿರುತ್ತಾರೆ. ಮೇಲ್ಮನವಿದಾರರ ಪರ ನ್ಯಾಯವಾದಿಗಳು, ದೂರುದಾರರು ಹಾಗೂ ಅವರ ಪರ ವಕೀಲರು, ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಕಚೇರಿಯ ಅಧಿಕಾರಿಗಳು, ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ ರವರ ಪರ ಅಧಿಕಾರಿಗಳು ಹಾಜರಿದ್ದು, ಅವರಿಂದ ಸಂಬಂಧಪಟ್ಟ ವರದಿ, ಸ್ಪಷ್ಟೀಕರಣವನ್ನು ಪಡೆಯುವ ಮೂಲಕ ವಿಚಾರಣೆ ಮಾಡಿ ಅಂತಿಮವಾಗಿ ಆರೋಪಿತ ಸದಸ್ಯರು ಕಾರ್ಪೊರೇಟರ್ ಆಗುವ ಮುನ್ನವೇ ಅಂಗಡಿಗಳ ಹರಾಜು ನಡೆದಿರುವುದು ನಿರ್ವಿವಾದ. ತಿನಿಸು ಕಟ್ಟೆಗಳ ಹರಾಜು ಪ್ರಕ್ರಿಯೆಯಲ್ಲಿ ಅಧಿಕಾರ ದುರುಪಯೋಗದ ಯಾವುದೇ ಸುಳಿವು ಇಲ್ಲ ಎಂಬುದು ವಾದಗಳಿಂದ ಸ್ಪಷ್ಟವಾಗಿದೆ. ಆದರೆ ಆರೋಪಿತ ಸದಸ್ಯರು ಮಹಾನಗರಪಾಲಿಕೆಯ ಕೌನ್ಸಿಲರ್ ಆದ ಮೇಲೆ ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಇರುವ ತಿನಿಸುಕಟ್ಟೆ ಮಳಿಗೆಗಳನ್ನು ಮಹಾನಗರಪಾಲಿಕೆಗೆ ಬಿಟ್ಟುಕೊಡಬೇಕಾಗಿತ್ತು. ಆದರೆ ಅವರು ಹಾಗೆ ಮಾಡದೆ, ಈ ಮಳಿಗೆಗಳನ್ನು ತಮ್ಮ ಕುಟುಂಬದ ಸದಸ್ಯರ ಬಳಿ ಉಳಿಸಿಕೊಂಡಿರುತ್ತಾರೆ. ಇದರಿಂದ ಇಬ್ಬರು ಕೌನ್ಸಿಲರ್‌ಗಳು ಪರೋಕ್ಷವಾಗಿ ಮಹಾನಗರಪಾಲಿಕೆಯಿಂದ ಲಾಭ ಪಡೆಯುತ್ತಿದ್ದಾರೆ. ಇದರಿಂದಾಗಿ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, 1976 ರ ಕಲಂ 26 ರ ಉಪ ಕಲಂ (1)(ಕೆ) ರಂತೆ ಆರೋಪಿತ ಸದಸ್ಯರನ್ನು ಮಹಾನಗರಪಾಲಿಕೆಯ ಕೌನ್ಸಿಲರಾಗಿ ಅನರ್ಹಗೊಳಿಸಬಹುದು ಎಂದು ಭಾವಿಸಬೇಕಾಗುತ್ತದೆ ಎಂದು ಪ್ರಸ್ತಾಪಿಸಿ ಆರೋಪಿತ ಸದಸ್ಯರ ವಿರುದ್ಧದ ಪ್ರಸ್ತಾವನೆಯಲ್ಲಿ ಹಾಗೂ ದೂರಿನಲ್ಲಿ ವಿವರಿಸಿರುವ ಅಂಶಗಳು

ಸಾಬೀತಾಗಿರುತ್ತವೆ ಎಂದು ತೀರ್ಮಾನಿಸಿ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಸೆಕ್ಷನ್–26(1)(ಕೆ) ರನ್ವಯ ಇಬ್ಬರು ಆರೋಪಿತ ಕಾರ್ಪೊರೇಟರ್ ಗಳನ್ನು ಪಾಲಿಕೆಯ ಸದಸ್ಯತ್ವದಿಂದ ಅನರ್ಹಗೊಳಿಸಿ ಹಾಗೂ ಸದರಿ ಕಾರ್ಪೊರೇಟರ್‌ಗಳ ಅನರ್ಹತೆಯ ಕಾರಣ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಸೆಕ್ಷನ್–26(2) ರನ್ವಯ ಬೆಳಗಾವಿ ಮಹಾನಗರ ಪಾಲಿಕೆಯ ವಾರ್ಡ್ ನಂ.23 & ವಾರ್ಡ್ ನಂ.41 ರ ಎರಡು ಕಾರ್ಪೊರೇಟರ್ ಸ್ಥಾನಗಳು ತೆರವಾಗಿರುವುದಾಗಿ ದಿನಾಂಕ:10/02/2025 ರಂದು ಆದೇಶ ಹೊರಡಿಸಿರುತ್ತಾರೆ.

xii. ಮೂರನೇ ಪ್ರತಿವಾದಿಯಾಗಿರುವ ಶ್ರೀ ಸುಜಿತ್ ಎಂ ಮುಳಗುಂದ, ಬೆಳಗಾವಿ ರವರ ಪರ ವಕೀಲರು ಸಲ್ಲಿಸಿರುವ ಲಿಖಿತ ವಾದದಲ್ಲಿ ಮೇಲ್ಮನವಿದಾರರು ಪ್ರಾದೇಶಿಕ ಆಯುಕ್ತರ ಮುಂದೆ ನಡೆದ ನಡವಳಿಗಳಲ್ಲಿ ಮಳಿಗೆಗಳನ್ನು ಈಗಲೂ ತಮ್ಮ ಪತ್ನಿಯರು ನಿರ್ವಹಣೆ ಮಾಡುತ್ತಿದ್ದಾರೆ. ಇದರಿಂದಾಗಿ ಮೇಲ್ಮನವಿದಾರರು ಸಾರ್ವಜನಿಕ ಪಾತ್ರದಲ್ಲಿ ಆರ್ಥಿಕ ಲಾಭ ಹೊಂದಿಲ್ಲ ಎಂಬುದನ್ನು ತಿಳಿಸಲು ವಿಫಲರಾಗಿದ್ದು, ಕಲಂ–26(1)(ಕೆ) ರನ್ವಯ ಉಲ್ಲಂಘನೆಯಾಗಿರುತ್ತದೆ. ಹಾಗೂ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮದಡಿ ಸಲ್ಲಿಸುವ ವಾರ್ಷಿಕ ಆಸ್ತಿ ವರದಿಯಲ್ಲಿ ಸ್ವಯಂ ಪ್ರೇರಿತವಾಗಿ ಈ ಮಾಹಿತಿಯನ್ನು ಸಲ್ಲಿಸಬೇಕಿದ್ದು, ಇವರು ಈ ಆಸ್ತಿ ವಿವರಗಳನ್ನು ಸಲ್ಲಿಸಲು ವಿಫಲರಾಗಿರುತ್ತಾರೆ ಎಂದು ಸಲ್ಲಿಸಿರುತ್ತಾರೆ.

xiii. ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ, 1976, ನಿಯಮ 19 ರ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ:

19. Declaration of assets etc.-

(1) Every councilor referred to in clause (a) of sub-section (1) of section 7 shall, not later than one month after the commencement of his term of office and in the same month of each succeeding year, file with the Mayor a declaration of all assets owned by him and any member of his family. Such declaration shall form part of the corporation records.

(2) If any councillor fails to file the declaration referred to in sub-section (1) or files the same knowing it to be false or incorrect he shall cease to be a councillor.

(3) Any question whether disqualification under sub-section (2) has occurred shall be decided, on reference made by the corporation, by Government and the decision of Government thereon, shall be final.

Explanation.- For purposes of this section family means the spouse and dependant children of the councillor.

xiv. ಬೆಳಗಾವಿ ಮಹಾನಗರಪಾಲಿಕೆ ಆಯುಕ್ತರು ಸಲ್ಲಿಸಿರುವ ವರದಿಯಲ್ಲಿ ಬೆಳಗಾವಿ ಮಹಾನಗರಪಾಲಿಕೆಯ ವಾರ್ಡ್ ನಂ.23 ರ ನಗರ ಸೇವಕರಾದ ಶ್ರೀ ಜಯಂತ ಜಾಧವ ಹಾಗೂ ವಾರ್ಡ್ ನಂ.41 ರ ನಗರ ಸೇವಕರಾದ ಶ್ರೀ ಮಂಗೇಶ ಪವಾರ ಇವರುಗಳು ಸನ್ 2023–24 ನೇ ಸಾಲಿನ ಹಾಗೂ ಸನ್ 2024–25 ನೇ ಸಾಲಿನ ಆಸ್ತಿ ಮತ್ತು ದಾಯಿತ್ವ ಪಟ್ಟಿಗಳನ್ನು ಪರಿಶೀಲಿಸಲಾಗಿ, ಸದರಿಯವರು ಲೋಕೋಪಯೋಗಿ ಇಲಾಖೆಯ ಜಾಗೆಯಲ್ಲಿ ನಿರ್ಮಿಸಲಾದ ತಿನಿಸುಕಟ್ಟೆ ಮಳಿಗೆಗಳನ್ನು ಪಡೆದ ಬಗ್ಗೆ ಆಸ್ತಿ ಮತ್ತು ದಾಯಿತ್ವ ಪಟ್ಟಿಗಳಲ್ಲಿ ನಮೂದಿಸಿರುವುದು ಕಂಡುಬಂದಿರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ.

xv. ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ, 1976, ನಿಯಮ 19 ರನ್ವಯ ಚುನಾಯಿತ ಕಾರ್ಪೊರೇಟರ್‌ಗಳು ಅವರ ಅವಧಿ ಪ್ರಾರಂಭಗೊಂಡ ಒಂದು ತಿಂಗಳ ಒಳಗಾಗಿ ಅವರು ಹೊಂದಿರುವ ಹಾಗೂ ಅವರ ಕುಟುಂಬದ ಯಾವುದೇ ಸದಸ್ಯರು ಹೊಂದಿರುವ ಆಸ್ತಿ ಮತ್ತು ದಾಯಿತ್ವದ ವಿವರಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಬೆಳಗಾವಿ ಮಹಾನಗರಪಾಲಿಕೆ ಆಯುಕ್ತರು ಸಲ್ಲಿಸಿರುವ ವರದಿಯನ್ನು ಗಮನಿಸಿದಲ್ಲಿ ಈ ಇಬ್ಬರು ಕಾರ್ಪೊರೇಟರ್‌ಗಳು ಸಲ್ಲಿಸಿರುವ ಆಸ್ತಿ ಮತ್ತು ದಾಯಿತ್ವ ಪಟ್ಟಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಗುತ್ತಿಗೆ ಆಧಾರದ ಮೇಲೆ ಪಡೆದಿರುವ ಮಳಿಗೆ ಹಾಗೂ ಸದರಿ ಮಳಿಗೆಗಳಿಂದ ಹೊಂದುತ್ತಿರುವ ಆದಾಯದ ವಿವರಗಳನ್ನು ಸಲ್ಲಿಸದೇ ಇರುವುದು ಕಂಡುಬರುತ್ತದೆ.

xvi. ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಕಾರ್ಪೊರೇಟರ್ ಗಳಾಗಿದ್ದ ಶ್ರೀ. ಜಯಂತ ಜಾಧವ ಮತ್ತು ಶ್ರೀ. ಮಂಗೇಶ ಪವಾರ ರವರು ತಮ್ಮನ್ನು ಕಾರ್ಪೊರೇಟರ್ ಸ್ಥಾನದಿಂದ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು

ಅನರ್ಹಗೊಳಿಸಿರುವುದನ್ನು ಪ್ರಶ್ನಿಸಿ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಸೆಕ್ಷನ್–26(3) ರಡಿ ಮೇಲ್ಮನವಿಯನ್ನು ದಾಖಲಿಸಿರುತ್ತಾರೆ.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಸೆಕ್ಷನ್–26(3) ರ ಉದ್ಧೃತ ಭಾಗ ಈ ಕೆಳಕಂಡಂತೆ ವಿವರಣೆ ಇರುತ್ತದೆ:

"(3) ಉಪ ಪ್ರಕರಣದ ಮೇರೆಗೆ (ಪ್ರಾದೇಶಿಕ ಆಯುಕ್ತರು) ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂತಹ ತೀರ್ಮಾನದ ದಿನಾಂಕದಿಂದ 30 ದಿನಗಳ ಅವಧಿಯೊಳಗೆ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಂತಹ ಅಪೀಲಿನ ಮೇಲೆ ಸರ್ಕಾರವು ಮಾಡಿದ ಆದೇಶವು ಅಂತಿಮವಾದುದ್ದಾಗಿರತಕ್ಕದ್ದು.

ಪರಂತು ಯಾರೇ ಕೌನ್ಸಿಲರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು (2) ಮತ್ತು (3)ನೇ ಉಪಪ್ರಕರಣದ ಮೇರೆಗೆ ಅವನ ವಿರುದ್ಧ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ."

xvii. ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್–26, 26(1)(ಕೆ) ರ ಉಧೃತ ಭಾಗ ಈ ಕೆಳಗಿನಂತಿದೆ:

26. ಕೌನ್ಸೆಲರ್ ಆಗುವುದಕ್ಕೆ ಸಾಮಾನ್ಯ ಅನರ್ಹತೆಗಳು: (1) ಒಬ್ಬ ವ್ಯಕ್ತಿಯು, –

(ಎ) ……. (ಜೆ)……

(ಕೆ) ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವುದನ್ನುಳಿದು, ನಗರ ಪಾಲಿಕೆಯ ಆದೇಶದ ಮೂಲಕ ಮಾಡಿದ ಯಾವುದೇ ಕಾಮಗಾರಿಯಲ್ಲಿ ಅಥವಾ ನಗರ ಪಾಲಿಕೆಯು ಅಥವಾ ನಗರ ಪಾಲಿಕೆಯ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ನಗರ ಪಾಲಿಕೆಯಲ್ಲಿನ ಅಥವಾ ನಗರ ಪಾಲಿಕೆಯ ಅಧೀನದಲ್ಲಿನ ಉದ್ಯೋಗದಲ್ಲಿ ಅವನು ಸ್ವತ: ಅಥವಾ ಅವನ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ;

(ಎಲ್)…….. (ಓ)……

ಕೌನ್ಸಿಲರನಾಗಿ ಚುನಾಯಿತನಾಗಲು ಅಥವಾ ಕೌನ್ಸಿಲರನಾಗಿರಲು ಅನರ್ಹರಾಗಿರತಕ್ಕದ್ದು."

xviii. ಮೇಲ್ಮನವಿದಾರರು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಪೀಠ ಇಲ್ಲಿ ರಿಟ್ ಪೆಟಿಷನ್ ಸಂಖ್ಯೆ:7359/2025 ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:12/03/2025 ರಂದು ಹೊರಡಿಸಿರುವ ಮಧ್ಯಾಂತರ ಆದೇಶದಲ್ಲಿ ಇಬ್ಬರು ಕೌನ್ಸೆಲರ್ ಗಳನ್ನು ಅನರ್ಹಗೊಳಿಸಿ, ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ದಿನಾಂಕ:10/02/2025 ರಂದು ಹೊರಡಿಸಿರುವ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ ಹಾಗೂ ಅವರಿಗೆ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಮೇಯರ್–ಉಪಮೇಯರ್ ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಮೇಲ್ಮನವಿಯ ವಿಚಾರಣೆಯನ್ನು ತುರ್ತಾಗಿ ನಡೆಸುವಂತೆ ನಿರ್ದೇಶನ ನೀಡಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ ಮೇಲ್ಮನವಿದಾರರ ಅರ್ಜಿ, ಮೇಲ್ಮನವಿದಾರರು ದಾಖಲಿಸಿರುವ ಲಿಖಿತ ವಾದ ಮಂಡನೆ, ಪ್ರತಿವಾದಿ–1 ರವರು ದಾಖಲಿಸಿರುವ ಆಕ್ಷೇಪಣೆ ಹಾಗೂ ದಾಖಲಾತಿಗಳು ಹಾಗೂ ಪ್ರತಿವಾದಿ–3 ರವರು ಪರ ವಕೀಲರು ದಾಖಲಿಸಿರುವ ಲಿಖಿತ ವಾದ ಮಂಡನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಈ ಕೆಳಗಿನಂತೆ ಆದೇಶಿಸಲಾಗಿದೆ.

ಸಂಖ್ಯೆ:ನಅಇ 36 ಎಂಎಲ್ಆರ್ 2025 **ದಿನಾಂಕ: 26/06/2025**

: ಆದೇಶ :

ದಿನಾಂಕ:03/09/2021 ರಂದು ನಡೆದ ಬೆಳಗಾವಿ ಮಹಾನಗರ ಪಾಲಿಕೆಯ ವಾರ್ಡುವಾರು ಚುನಾವಣೆಯಲ್ಲಿ ವಾರ್ಡ್ ಸಂಖ್ಯೆ:23 ಕ್ಕೆ ಮೇಲ್ಮನವಿದಾರರಾದ ಶ್ರೀ. ಜಯಂತ ಜಾಧವ ಹಾಗೂ ವಾರ್ಡ್ ಸಂಖ್ಯೆ:41 ಕ್ಕೆ ಮತ್ತೊಬ್ಬ ಮೇಲ್ಮನವಿದಾರರಾದ ಶ್ರೀ. ಮಂಗೇಶ ಪವಾರ ರವರು ಚುನಾಯಿತರಾಗಿರುತ್ತಾರೆ; ಈ ಚುನಾವಣೆಗಳ ಫಲಿತಾಂಶವನ್ನು ದಿನಾಂಕ:06/09/2021 ರಂದು ಘೋಷಿಸಲಾಗಿರುತ್ತದೆ ಹಾಗೂ ದಿನಾಂಕ:06/02/2023 ರಂದು ಕಾರ್ಪೊರೇಟರ್ ಆಗಿ ಇವರು ಪ್ರಮಾಣ ವಚನ ಸ್ವೀಕರಿಸಿರುತ್ತಾರೆ. ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ ನಿರ್ಮಾಣ ಮಾಡಿರುವ "ತಿನಿಸು ಕಟ್ಟೆ" ಮಳಿಗೆಗಳ ಹಂಚಿಕೆಗಾಗಿ

ದಿನಾಂಕ:09/12/2020 ರಂದು ನಡೆದ ಬಹಿರಂಗ ಹರಾಜಿನಲ್ಲಿ ಮೇಲ್ಮನವಿದಾರರಾದ ಶ್ರೀ. ಜಯಂತ ಜಾಧವ ರವರ ಪತ್ನಿ ಶ್ರೀಮತಿ. ಸೋನಾಲಿ ಜೆ. ಜಾಧವ ರವರಿಗೆ ಮಳಿಗೆ ಸಂಖ್ಯೆ:29 ಹಾಗೂ ಶ್ರೀ. ಮಂಗೇಶ ಪವಾರ ರವರ ಪತ್ನಿ ಶ್ರೀಮತಿ ನೀತಾ ಮಂಗೇಶ ಪವಾರ ರವರಿಗೆ ಮಳಿಗೆ ಸಂಖ್ಯೆ:28 ಹಂಚಿಕೆ ಆಗಿರುವುದು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ ರವರು ಸಲ್ಲಿಸಿರುವ ವರದಿಯಿಂದ ಕಂಡುಬಂದಿರುತ್ತದೆ. ಈ ಮಳಿಗೆಗಳು ಮೇಲ್ಮನವಿದಾರರು ಕೌನ್ಸಿಲರ್ ಆಗಿ ಚುನಾಯಿತರಾಗುವ ಪೂರ್ವದಲ್ಲಿ ಅವರ ಪತ್ನಿಯವರಿಗೆ ಬಹಿರಂಗ ಹರಾಜು ಮೂಲಕ ಹಂಚಿಕೆಯಾಗಿದ್ದು, ತಮಗೆ ಹಂಚಿಕೆಯಾಗಿರುವುದಿಲ್ಲವೆಂದು ಮೇಲ್ಮನವಿದಾರರು ತಿಳಿಸಿರುತ್ತಾರೆ. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ರವರು ತಮಗೆ ಸಲ್ಲಿಕೆಯಾದ ದೂರು ಅರ್ಜಿಯ ಸಂಬಂಧ, ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಆಯುಕ್ತರು, ಮಹಾನಗರಪಾಲಿಕೆ, ಬೆಳಗಾವಿ ಲೊಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ಇವರಿಂದ ವರದಿ ಪಡೆದು ನಂತರ ದೂರು ಅರ್ಜಿ ಹಾಗೂ ವರದಿಗಳ ಸಂಬಂಧವಾಗಿ ಮೇಲ್ಮನವಿದಾರರಿಗೆ ನೋಟೀಸ್ ನೀಡಿ ವಿಚಾರಣೆ ಜರುಗಿಸಿ ವಿಚಾರಣೆಯಲ್ಲಿ ಮೇಲ್ಮನವಿದಾರರಿಗೆ ಅವಕಾಶ ನೀಡಿ, ಆರೋಪಿತ ಸದಸ್ಯರು ಮಹಾನಗರಪಾಲಿಕೆಯ ಕೌನ್ಸಿಲರ್ ಆದ ಮೇಲೆ ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಇರುವ ತಿನಿಸುಕಟ್ಟೆ ಮಳಿಗೆಗಳನ್ನು ಮಹಾನಗರಪಾಲಿಕೆಗೆ ಬಿಟ್ಟುಕೊಡಬೇಕಾಗಿತ್ತು. ಆದರೆ ಅವರು ಹಾಗೆ ಮಾಡದೆ, ಈ ಮಳಿಗೆಗಳನ್ನು ತಮ್ಮ ಕುಟುಂಬದ ಸದಸ್ಯರ ಬಳಿ ಉಳಿಸಿಕೊಂಡಿರುತ್ತಾರೆ. ಇದರಿಂದ ಇಬ್ಬರು ಕೌನ್ಸಿಲರ್‌ಗಳು ಪರೋಕ್ಷವಾಗಿ ಮಹಾನಗರಪಾಲಿಕೆಯಿಂದ ಲಾಭ ಪಡೆಯುತ್ತಿದ್ದಾರೆ. ಇದರಿಂದಾಗಿ, ಆರೋಪಿತ ಸದಸ್ಯರ ವಿರುದ್ಧದ ದೂರಿನಲ್ಲಿ ವಿವರಿಸಿರುವ ಅಂಶಗಳು ಸಾಬೀತಾಗಿರುತ್ತವೆ ಎಂದು ತೀರ್ಮಾನಿಸಿ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಸೆಕ್ಷನ್–26(1)(ಕೆ) ರನ್ವಯ ಈ ಇಬ್ಬರು ಕಾರ್ಪೊರೇಟರ್ ಗಳನ್ನು ಪಾಲಿಕೆಯ ಸದಸ್ಯತ್ವದಿಂದ ಅನರ್ಹಗೊಳಿಸಿ ಹಾಗೂ ಈ ಕಾರ್ಪೊರೇಟರ್ ಗಳ ಅನರ್ಹತೆಯ ಕಾರಣ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಸೆಕ್ಷನ್–26(2) ರನ್ವಯ ಬೆಳಗಾವಿ ಮಹಾನಗರ ಪಾಲಿಕೆಯ ವಾರ್ಡ್ ನಂ.23 & ವಾರ್ಡ್ ನಂ.41 ರ ಎರಡು ಕಾರ್ಪೊರೇಟರ್ ಸ್ಥಾನಗಳು ತೆರವಾಗಿರುವುದಾಗಿ ದಿನಾಂಕ:10/02/2025

ರಲ್ಲಿ ಆದೇಶ ಹೊರಡಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ಅಂಶಗಳು, ಪ್ರಾದೇಶಿಕ ಆಯುಕ್ತರು ಹೊರಡಿಸಿರುವ ಆದೇಶಲ್ಲಿ ಪರಿಗಣಿಸಿರುವ ಅಂಶಗಳು ಹಾಗೂ ಲಿಖಿತ ವಾದ, ಸಂಬಂಧಿಸಿದ ದಾಖಲೆ ಮತ್ತು ಮಾಹಿತಿಗಳನ್ನು ಪರಿಶೀಲಿಸಿ, ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಸೆಕ್ಷನ್–26(3) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ.

(ದೀಪ ಚೋಳನ್)
ಸರ್ಕಾರದ ಕಾರ್ಯದರ್ಶಿ ಹಾಗೂ
ಮೇಲ್ಮನವಿ ಪ್ರಾಧಿಕಾರ,
ನಗರಾಭಿವೃದ್ಧಿ ಇಲಾಖೆ